**O.S.No.19/2025**
**PW1**

ದಿನಾಂಕ 23.02.2026 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಎಂ.ವಿ.ಜಿ ವಕೀಲರಿಂದಃ

ಈ ಪ್ರಕರಣದಲ್ಲಿ ನಾನು ವಾದಿಯಾಗಿದ್ದು, ನನ್ನ ಮುಖ್ಯ ವಿಚಾರಣೆ ಬದಲಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ. ಅದರಲ್ಲಿ ಹೇಳಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ ಮತ್ತು ಅದರಲ್ಲಿರುವ ಸಹಿಗಳು ನನ್ನದೇ ಆಗಿರುತ್ತವೆ.

ಮೂರು ಪಹಣಿ ಪತ್ರಿಕೆಗಳನ್ನು ನಿಪಿ–1 ರಿಂದ 3 ಎಂದು, ದಿ. 16.9.2017 ರ ಕ್ರಯ ಪತ್ರದ ದೃಢೀಕೃತ ನಕಲನ್ನು ನಿಪಿ–4, ಲೀಗಲ್ ನೋಟೀಸಿನ ಕಚೇರಿ ಪ್ರತಿಯನ್ನು ನಿಪಿ–5 ಎಂದು, ಎರಡು ಅಂಚೆ ಸ್ವೀಕೃತಿ ಪತ್ರಗಳನ್ನು ನಿಪಿ–6 ಮತ್ತು 7 ಎಂದು, ಪ್ರತ್ಯುತ್ತರ ನೋಟೀಸನ್ನು ನಿಪಿ–8 ಎಂದು, 13 ಲೀಗಲ್ ನೋಟೀಸಿನ ಕಚೇರಿ ಪ್ರತಿಗಳನ್ನು ನಿಪಿ–9 ರಿಂದ 21 ಎಂದು, ಅಂಚೆ ರಶೀದಿಗಳನ್ನು ಒಟ್ಟಾಗಿ ನಿಪಿ–22 ಎಂದು, 12 ಅಂಚೆ ಸ್ವೀಕೃತಿ ಪತ್ರಗಳನ್ನು ಒಟ್ಟಾಗಿ ನಿಪಿ–23 ಎಂದು, ಏಳು ಪ್ರತ್ಯುತ್ತರ ನೋಟೀಸುಗಳನ್ನು ನಿಪಿ–24 ರಿಂದ 30 ಎಂದು, ಮೂರು ಬ್ಯಾಂಕ್ ಡೆಪಾಸಿಟ್ ದಾಖಲೆಗಳನ್ನು ನಿಪಿ–31 ರಿಂದ 33 ಎಂದು ಗುರುತಿಸಲಾಯಿತು.

(ಪ್ರತಿವಾದಿ ಪರ ವಕೀಲರು ತಕರಾರಿನ ಮೇಲೆ ಗುರುತಿಸಬೇಕು ಎಂದು ಕೇಳಿದ್ದು ಯಾವ ಕಾರಣಕ್ಕೆ ತಕರಾರು ಎಂದು ತಿಳಿಸದ ಕಾರಣ ಸದರಿ ತಕರಾರನ್ನು ನಿರಾಕರಿಸಲಾಯಿತು)

(ಪಾಟೀ ಸವಾಲಿಗೆ ಕಾಲಾವಕಾಶ ಕೇಳಿದ ಮೇರೆಗೆ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

(ಸಾ.ಓ.ಹೇ.ಕೇ.ಸ.ಇ.ಎ.ಒ)

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಸುಳ್ಯ